## ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

---

ಸಂ:ಕಂ:ಹ.ಬ.ವಿವಾದ: 133/2014-15 ದಿ:27-05-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1) ಮಹಾನಂದಿಗೌಡ ತಂದೆ: ಪೊಂಪನಗೌಡ
ಶಾನವಾಸಪುರ ಗ್ರಾಮ ಸಿರುಗುಪ್ಪ ತಾಲೂಕ

2) ಬಿ. ಚೆನ್ನನಗೌಡ ಉರುಫ್ ಬಿ.ಚನ್ನಬಸವನಗೌಡ
ತಂದೆ: ಲೇಪನಗೌಡ ಶಾಸ್ತ್ರಿನಗರ, ಬಳ್ಳಾರಿ
ತಾ: ಜಿ: ಬಳ್ಳಾರಿ

**ಪ್ರತಿವಾದಿಗಳು**

ಶಾಂತಲಾ ಅಲಿಯಾಸ್ ಅಂಗಡಿ ಸಿದ್ದಲಿಂಗಮ್ಮ
ಗಂಡ: ಮಹಾನಂದಿಗೌಡ, ಅರಳಿಗನೂರುಗ್ರಾಮ
ಸಿರುಗುಪ್ಪ ತಾಲೂಕ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಡು ಸಂಖ್ಯೆ |
|---|---|---|---|---|
| ಶಾನವಾಸಪುರ ಗ್ರಾಮ | 11/1a2 | 8-83 | H-49/2012-13 | 82/2012-13 |

ಪೀಠಿಕೆ:-

ಸಿರುಗುಪ್ಪ ತಾಲೂಕಿನ **ಶಾನವಾಸಪುರ ಗ್ರಾಮದ** ಸ.ನಂ. **11/1a2** ವಿಸ್ತೀರ್ಣ 8-83 ಸೆಂಟ್ಸ್ ಜಮೀನಿಗೆ ಸಂಭಂದಿಸಿದಂತೆ ,ಸಿರುಗುಪ್ಪ ಉಪ ನೊಂದಣಿ ಕಛೇರಿ ಪತ್ರ ನಂ: **SRG-1-08871//2012-13 Dt.20-3-2013** ರ ಕ್ರಯಪತ್ರ ನೊಂದಣಿಯಾದ ಪ್ರಕಾರ ರಂದು ಬಿ. ಚೆನ್ನನಗೌಡ ಉರುಫ್ ಬಿ. ಚನ್ನ **ಬಸವನಗೌಡ ತಂದೆ: ಲೇಪನಗೌಡ, ಬಳ್ಳಾರಿ ಇವರ ಹೆಸರಿನಲ್ಲಿ** ಖಾತೆಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ **ಶಾಂತಲಾ ಅಲಿಯಾಸ್ ಅಂಗಡಿ ಸಿದ್ದಲಿಂಗಮ್ಮ ಗಂಡ: ಮಹಾನಂದಿಗೌಡ ಅರಳಿಗನೂರು ಗ್ರಾಮ** ಇವರು ದಿ:25-03-2013 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು **ದಿ:09-6-2014, 23-6-2014,14-7-2014, 26-10-2015, 8-3-2016, 21-3-2016,13-5-2016 ಮತ್ತು 20-5-2016** ರಂದು ಪ್ರಕರಣಕ್ಕೆ ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ

-2-

ವಾದಿಗಳಾದ ಬಿ.ಚನ್ನನಗೌಡ ಅಲಿಯಸ್ ಚೆನ್ನ ಬಸವನಗೌಡ ತಂದೆ: ಬಿ.ಲೇಪನಗೌಡ ಬಳ್ಳಾರಿ ಇವರು ಶಾನವಾಸಪುರ ಗ್ರಾಮದ ಸ.ನಂ.**11/1a2** ವಿಸ್ತೀರ್ಣ8–83 ಸೆಂಟ್ಸ್ ಜಮೀನು ಮಹಾನಂದಿಗೌಡ ತಂದೆ: ಪೊಂಪನಗೌಡ ಶಾನವಾಸಪುರ ಗ್ರಾಮ ಇವರ ಹೆಸರಿನಲ್ಲಿ ಪಟ್ಟ ಇದ್ದು ಸಿರುಗುಪ್ಪ ಉಪನೊಂದಣಿ ಕಛೇರಿ ಪತ್ರ ನಂ: 8871/12–13 ದಿ:20–3–2013 ರಲ್ಲಿ ಕ್ರಯ ನೊಂದಣಿ ಹೊಂದಿದ್ದು ಪಟ್ಟವರ್ಗಾವಣೆ ಸಮಯದಲ್ಲಿ ಶಾಂತಲಾ ಅಲಿಯಾಸ್ ಅಂಗಡಿಸಿದ್ದಲಿಂಗಮ್ಮ, ಅರಳಿಗನೂರು ಇವರು ದಿ:25–3–2013 ರಂದು ಆಕ್ಷೇಪಣೆ ಅರ್ಜಿಸಲ್ಲಿಸಿರುತ್ತಾರೆ. ನಂತರ ಉಪನೊಂದಣಿ ಕಛೇರಿಪತ್ರ ನಂ:6632/15–16 ದಿ:5–1–2016ರಂದು ವಿಕ್ರಯಪತ್ರದ ರದ್ದುಪತ್ರ ಪ್ರಕಾರ ರದ್ದುಪಡಿಸಿದೆ. ದೊಡ್ಡ ಮನುಷ್ಯರ ಪರಿಷ್ಕಾರ ಮಾಡಿದ ಪ್ರಕಾರ ಶಾನವಾಸಪುರ ಗ್ರಾಮದ ಸ.ನಂ.68/2 ವಿಸ್ತೀರ್ಣ 3–00 ಎಕರೆ ಜಮೀನು, ಶಾಂತಲ ಇವರಿಗೆ, ಮತ್ತು ಇವರ ಮಕ್ಕಳಾದ ಎಸ್. ಚಂದ್ರಿಕ ಇವರಿಗೆ ಸ.ನಂ.68/6 ವಿಸ್ತೀರ್ಣ 3–00 ಎಕರೆ ಹಾಗೂ ಎಸ್. ರೇಖ ಇವರಿಗೆ ಸ.ನಂ.68/5 ವಿಸ್ತೀರ್ಣ 3–00 ಎಕರೆ ಜಮೀನು ಬಿಟ್ಟುಕೊಟ್ಟಿರುತ್ತಾರೆ. ಆದ್ದರಿಂದ ಪರಸ್ಪರ ಒಪ್ಪಿ ತಕರಾರು ಅರ್ಜಿಯನ್ನು ಹಿಂದಕ್ಕೆ ಪಡೆದಿರುತ್ತಾರೆ .ಆದ್ದರಿಂದ ವಿಕ್ರಯ ರದ್ದು ಪತ್ರ ಪ್ರಕಾರ ಪಟ್ಟ ವರ್ಗಾವಣೆ ಮಾಡಲು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು

ಪ್ರತಿವಾದಿಗಳಾದ ಶಾಂತಲಅಲಿಯಾಸ್ಅಂಗಡಿಸಿದ್ದಲಿಂಗಮ್ಮ, ಗಂಡ:ಮಹಾನಂದಿಗೌಡ, ಅರಳಿಗನೂರು ಗ್ರಾಮ, ಸಿರುಗುಪ್ಪ ತಾಲೂಕ ಇವರು ಶಾನವಾಸಪುರ ಗ್ರಾಮದ ಸ.ನಂ.**11/1a2** ವಿಸ್ತೀರ್ಣ 8–83 ಸೆಂಟ್ಸ್ ಜಮೀನು ನನ್ನ ಗಂಡನಾದ ಮಹಾನಂದಿಗೌಡ ತಂದೆ: ಪೊಂಪನಗೌಡ ಶಾನವಾಸಪುರ ಇವರ ಹೆಸರಿನಲ್ಲಿ ಪಟ್ಟ ಇದ್ದು ನನ್ನ ಗಂಡನವರು ಬಿ. ಚೆನ್ನನಗೌಡ ಅಲಿಯಾಸ್ ಚೆನ್ನ ಬಸವನಗೌಡ ತಂದೆ: ಬಿ.ಲೇಪನಗೌಡ ಇವರ ಹೆಸರಿಗೆ ಸಿರುಗುಪ್ಪ ಉಪನೊಂದಣಿ ಕಛೇರಿ ಪತ್ರನಂ: 8871/12–13 ದಿ:20–3–2013 ರ ಕ್ರಯನೊಂದಣಿ ಮಾಡಿದ್ದು ಪಟ್ಟ ವರ್ಗಾವಣೆಮಾಡುವ ಸಮಯದಲ್ಲಿ ದಿ:25–3–2014 ರಂದು ತಕರಾರು ಅರ್ಜಿ ಸಲ್ಲಿಸಿರುತ್ತೇನೆ. ದೊಡ್ಡ ಮನುಷ್ಯರು ಪಂಚಾಯಿತಿ ನಿರ್ವಹಿಸಿ ಪರಿಷ್ಕಾರ ಮಾಡಿದ ಪ್ರಕಾರ ನನಗೆ ಶಾನವಾಸಪುರ ಗ್ರಾಮದ ಸ.ನಂ.68/2 ವಿಸ್ತೀರ್ಣ 3–00 ಎಕರೆ ಜಮೀನು, ನನ್ನ ಮಕ್ಕಳಾದ ಎಸ್. ಚಂದ್ರಿಕ ಇವರಿಗೆ ಸ.ನಂ. 68/6 ವಿಸ್ತೀರ್ಣ 3–00 ಎಕರೆ ಹಾಗೂ ಎಸ್. ರೇಖ ಇವರಿಗೆ ಸ.ನಂ. 68/5 ವಿಸ್ತೀರ್ಣ 3–00 ಎಕರೆ ಜಮೀನು ಬಿಟ್ಟುಕೊಟ್ಟಿರುತ್ತಾರೆ. ಆದ್ದರಿಂದ ಪರಸ್ಪರ ಒಪ್ಪಿ ತಕರಾರು ಅರ್ಜಿಯನ್ನು ಹಿಂದಕ್ಕೆ ಪಡೆದಿರುತ್ತೇನೆ. ಕಾರಣ ಪಟ್ಟ ವರ್ಗಾವಣೆ ಮಾಡಬಹುದೆಂದು ಇನ್ನು ಮುಂದೆ ನಾನು ಯಾವುದೇ ಆಕ್ಷೇಪಣೆ ಗಳನ್ನು ಮಾಡುವುದಿಲ್ಲವೆಂದು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನುಪತ್ರ ನಂ: 6632/15–16 ದಿ: 5–1–2016 ರಂದು ವಿಕ್ರಯಪತ್ರದ ರದ್ದುಪತ್ರ ಪ್ರಕಾರ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಶಾನವಾಸಪುರಗ್ರಾಮದ ಸ.ನಂ.**11/1a2** ವಿಸ್ತೀರ್ಣ 8–83 ಸೆಂಟ್ಸ್ ಜಮೀನು ಸಿರುಗುಪ್ಪ ಉಪನೊಂದಣಿ ಕಛೇರಿ **SRG-1-6632/ 2015-16 Dt.5-1-2016** ರ ರ ವಿಕ್ರಯಪತ್ರದ ರದ್ದುಪತ್ರ ಪ್ರಕಾರ ಮಹಾನಂದಿಗೌಡ ತಂದೆ: ಪೊಂಪನಗೌಡ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:27–05–2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು,
ಕರೂರು
ನಾಡ ಕಚೇರಿ, ಸಿರುಗುಪ್ಪ ತಾ.

ಇದರ ಪ್ರತಿಯನ್ನು:

1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ